1	2	3	4	5
16)	Mysore	232	125	-
17)	Raichur	144	54	-
18)	Shimoga	153	82	1
19)	Tumkur	164	66	-
20)	Uttar Kannada	80	32	-
	Total	**3617**	**3102**	**11**

1993-94ನೆ ಸಾಲಿನ ಬೆಂಗಳೂರು ಜಿಲ್ಲೆಯ ಅಬಕಾರಿ ಗುತ್ತಿಗೆದಾರಿಕೆಯ ಮಾಹಿತಿ.

210- ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ನೀಡಿದ ಅಬಕಾರಿ ಗುತ್ತಿಗೆದಾರರ ಹೆಸರು ಮತ್ತು ವಿಳಾಸಗಳೇನು?

ಆ) ಸರ್ಕಾರಕ್ಕೆ ಪ್ರತಿ ತಿಂಗಳು ಬರುವ ಅಬಕಾರಿ ಆದಾಯ ಎಷ್ಟು, ಬಾಕಿ ಇರುವ ಅಬಕಾರಿ ಹಣದ ಮೊತ್ತ ಎಷ್ಟು?

ಇ) ಸರ್ಕಾರದವರು ಬಾಕಿ ವಸೂಲಾತಿಗೆ ಕೈಗೊಂಡ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಶ್ರೀ ಬಿ. ಈಶ್ವರಸ್ವಾಮಿ, ನಂ. 61, ಕಿಲಾರಿ ರಸ್ತೆ, ಬೆಂಗಳೂರು ಇವರು 1993-94ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಯ ಗುತ್ತಿಗೆಯನ್ನು ಪಡೆದುಕೊಂಡಿರುತ್ತಾರೆ.

ಆ) ಬೆಂಗಳೂರು ನಗರ ಜಿಲ್ಲೆಯ 1993-94ನೇ ಸಾಲಿನ ತಿಂಗಳ ಬಾಡಿಗೆ ರೂ. 6,27,00,000ಗಳು ಇರುತ್ತದೆ. ಮತ್ತು ರೂ. 10.63 ಕೋಟಿ ರೂಪಾಯಿ ಮತ್ತು ಅದಕ್ಕೆ ತಗಲುವ ಬಡ್ಡಿಯೂ ಸದರಿ ಗುತ್ತಿಗೆದಾರರಿಂದ ಬಾಕಿ ಇರುತ್ತದೆ.

ಇ) ದಿನಾಂಕ 2-2-94 ರಂದು ಸರ್ಕಾರವು ಸದರಿ ಗುತ್ತಿಗೆದಾರರಿಗೆ ನೀಡಿದ್ದ ಬೆಂಗಳೂರು ನಗರ ಜಿಲ್ಲೆಯ ಗುತ್ತಿಗೆಯನ್ನು ರದ್ದುಗೊಳಿಸಿತ್ತಲ್ಲದೆ, ಸದರಿಯವರು ನೀಡಿದ್ದ ತೇವಣಿ ರೂ. 6,27,00,000-00 ಗಳು ಈಗಾಗಲೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಉಳಿದ ಬಾಕಿ ಮೊತ್ತವು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ನಲ್ಲಿ 1991ರಿಂದ ಇಲ್ಲಿಯ ತನಕ ನಡೆದ ಅಬಕಾರಿ ಧಾಳಿ.

211 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?